**ಕರ್ನಾಟಕ ಸರ್ಕಾರ**
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ
ಮಲ್ಲೇಶ್ವರಂ, ಬೆಂಗಳೂರು-03
Aranya Bhavan, 18th Cross,
Malleshwaram, Bengaluru-03
Telephone: 080 23343770
Email: pccfkar@gmail.com

**No.** KFD/HOFF/B9(MSC)/1/2020-PnR-KFD **E - 249302**
ದಿನಾಂಕ:04.06.2025

## ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016ನ್ನು ಅನುಷ್ಠಾನಗೊಳಿಸುವ ಕುರಿತು ದಿನಾಂಕ:16.05.2025ರಂದು ನಡೆದ ಅಪೆಕ್ಸ್ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಿದಂತೆ, ಸದರಿ ಅಧಿನಿಯಮದಡಿ ರೂಪಿಸಿದ ನಿಯಮಾವಳಿ 2019ರ ನಿಯಮ 25 r/w ನಿಯಮ 9ರನ್ವಯ, **2025-26ನೇ ಸಾಲಿನಲ್ಲಿ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು, ಅರಣ್ಯ ರಕ್ಷಕರು** (ಪ್ರಸ್ತುತ ಗಸ್ತು ಅರಣ್ಯ ಪಾಲಕರು) **ಮತ್ತು ಅರಣ್ಯ ವೀಕ್ಷಕರ ತ್ರೈಮಾಸಿಕ ಅನಿಶ್ಚಿತ ವರ್ಗಾವಣೆ/ಸ್ಥಳನಿಯುಕ್ತಿ**(Contingent Transfers/Postings)**ಗೆ** ಸಂಬಂಧಿಸಿದಂತೆ ಸದರಿ ನಿಯಮಾವಳಿಯ ನಿಯಮ 22ರಲ್ಲಿನ ವಿವಿಧ ವರ್ಗಗಳಡಿ ಸ್ಥಳನಿಯುಕ್ತಿ ನೀಡಲು/ವರ್ಗಾಯಿಸಲು ಈ ಅಧಿಸೂಚನೆಯನ್ನು ಹೊರಡಿಸಲಾಗಿದೆ.

1. **ಅನಿಶ್ಚಿತ ವರ್ಗಾವಣೆ/ಸ್ಥಳನಿಯುಕ್ತಿಗೆ ಅರ್ಜಿ ಸಲ್ಲಿಸುವ ವಿಧಾನ: -** ನಿಯಮ 22ರಲ್ಲಿನ ವರ್ಗಗಳಿಗೆ ಸಂಬಂಧಿಸಿದ ಅರ್ಜಿದಾರರು ತಮ್ಮ ಆನ್ ಲೈನ್ ಅರ್ಜಿಗಳನ್ನು ಇಲಾಖೆಯ ಜಾಲತಾಣದಲ್ಲಿ ವರ್ಗಾವಣೆ ಮತ್ತು ಸಮಾಲೋಚನೆ ನಿರ್ವಹಣೆ ವ್ಯವಸ್ಥೆ (TCMS) ತಂತ್ರಾಂಶದ ಮೂಲಕ ಈ ಅಧಿಸೂಚನೆಯಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಸಲ್ಲಿಸುವುದು. **ಇತರೆ ವಿಧಾನದಲ್ಲಿ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ**.

   *[ಸೂಚನೆ:-*

   *ಅರ್ಜಿ ಸಲ್ಲಿಸಲು ಅರ್ಜಿದಾರರು ಸದರಿ ತಂತ್ರಾಂಶದಲ್ಲಿ ತಮ್ಮ ಕೆ.ಜಿ.ಐ.ಡಿ. ಮೂಲಕ Log in ಆಗಬಹುದಾಗಿದ್ದು, ಇಲಾಖೆಯ ವತಿಯಿಂದ ಒದಗಿಸಲಾಗಿರುವ ಹುದ್ದೆ ಆಧಾರಿತ ಮೊಬೈಲ್ ಸಂಖ್ಯೆ ಅಥವಾ ತಂತ್ರಾಂಶದಲ್ಲಿ ಲಭ್ಯವಿರುವ ಸಿಬ್ಬಂದಿಗಳ ವೈಯಕ್ತಿಕ ಮೊಬೈಲ್ ಸಂಖ್ಯೆಗಳಿಗೆ ರವಾನಿಸಲಾಗುವ O.T.P ಕಡ್ಡಾಯವಾಗಿರುತ್ತದೆ.]*

2. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರೆ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016ರ ಕಲಂ 6(2) ರಡಿ ಹಾಗೂ ನಿಯಮಾವಳಿ 2019ರ ನಿಯಮ 22 (xviii)ರಡಿ ಅಪೆಕ್ಸ್ ಪ್ರಾಧಿಕಾರವು ಸೇರಿಸಿದ ಸ್ವತಃ ಗಂಭೀರ ಖಾಯಿಲೆ ಪ್ರಕರಣಗಳಲ್ಲಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಈ ಅಧಿಸೂಚನೆಯ **ಅನುಬಂಧ-1**ರಲ್ಲಿ **ನಮೂದಿಸಿದ ಪ್ರಮಾಣ ಪತ್ರಗಳನ್ನು** ಕಡ್ಡಾಯವಾಗಿ ಅಪ್ ಲೋಡ್ ಮಾಡುವುದು **ಹಾಗೂ** ಸಮಾಲೋಚನೆ ಸಮಯದಲ್ಲಿ ಸದರಿ ಪ್ರಮಾಣ ಪತ್ರ/ದಾಖಲಾತಿಗಳ **ಮೂಲ ಪ್ರತಿಗಳನ್ನು ಹಾಜರುಪಡಿಸುವುದು**.

   *[**ಷರಾ:** ನಿಗದಿತ ವೃಂದಗಳಿಗೆ ಆಯಾ ವೃತ್ತವು ಜೇಷ್ಠತಾ ಘಟಕ(Unit of Seniority)ವಾಗಿದ್ದು, ಸದರಿ ಅವಕಾಶದಡಿ ಸ್ವೀಕರಿಸಿದ ಅಂತರವೃತ್ತ ವರ್ಗಾವಣೆಗಳನ್ನು ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ 1957ರಡಿ ಕೋರಿಕೆ ವರ್ಗಾವಣೆ ಎಂದು ಪರಿಗಣಿಸಲಾಗುವುದು.]*

**3.** ಅರ್ಜಿದಾರರು ಆನ್‌ ಲೈನ್‌ ಅರ್ಜಿ ಸಲ್ಲಿಸುವಾಗ ಅರ್ಜಿಯಲ್ಲಿ ಈ ಅಧಿಸೂಚನೆಯೊಂದಿಗೆ ಲಗತ್ತಿಸಿದ **ಅನುಬಂಧ-2ರಲ್ಲಿ** ವಿವಿಧ ಖಾಲಿ ಹುದ್ದೆಗಳ ಪೈಕಿ ಆದ್ಯತೆ ಮೇಲೆ ಭರ್ತಿ ಮಾಡಲು ಗುರುತಿಸಿದ ಹುದ್ದೆಗಳ ತಾತ್ಕಾಲಿಕ ಪಟ್ಟಿಯಿಂದ ಆಯ್ಕೆಯನ್ನು ಎಚ್ಚರಿಕೆಯಿಂದ ನಮೂದಿಸುವುದು. **ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದ ನಂತರ ಅರ್ಜಿಯಲ್ಲಿ ಯಾವುದೇ ಬದಲಾವಣೆ/ಪರಿಷ್ಕರಣೆ ಅಥವಾ ಅರ್ಜಿಯನ್ನು ಹಿಂಪಡೆಯಲು ಅವಕಾಶವಿರುವುದಿಲ್ಲ.**

*[**ಷರಾ:***

*a. ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಮತ್ತು ನಿಯಮಾವಳಿ 2019ರಲ್ಲಿನ ವಿವಿಧ ರೀತಿಯ ನಿಬಂಧನೆಗಳನ್ನು ಪಾಲಿಸಿ, ಸ್ಥಳ ನಿಯುಕ್ತಿ ನೀಡಬಹುದಾದ ಹುದ್ದೆಗಳು ಮಾತ್ರ ಆನ್‌ ಲೈನ್‌ ಅರ್ಜಿಯಲ್ಲಿ ಆಯ್ಕೆ ಮಾಡಬಹುದಾಗಿದೆ.*

*b. ಇಲಾಖೆಯ ಮಾನವ ಸಂಪನ್ಮೂಲ ದತ್ತಾಂಶವನ್ನು ನಿರಂತರ ಇಂದೀಕರಣ ಮಾಡಲಾಗುತ್ತಿದ್ದು, ವಿವಿಧ ಖಾಲಿ ಹುದ್ದೆಗಳ ಪೈಕಿ ಆದ್ಯತೆ ಮೇಲೆ ಭರ್ತಿ ಮಾಡಲು ಗುರುತಿಸಿ ಜಾಲಾತಾಣದಲ್ಲಿ ಪ್ರಕಟಿಸಿದ ಪಟ್ಟಿಗಳನ್ನು ವಿವಿಧ ವೃತ್ತ ಪ್ರಾಧಿಕಾರಗಳಿಂದ ಸ್ವೀಕರಿಸಿದ ಮಾಹಿತಿಯಂತೆ ತಯಾರಿಸಲಾಗಿದ್ದು/ಇಂದೀಕರಿಸಲಾಗುತ್ತಿದ್ದು, **ಕಾಲಕಾಲಕ್ಕೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ. ಪರಿಷ್ಕರಣೆಯಾದಲ್ಲಿ ಅಂತಹ ಹುದ್ದೆಗಳನ್ನು ಮಾತ್ರ ಸಮಾಲೋಚನೆ ಸಮಯದಲ್ಲಿ ಆದ್ಯತೆ ಮೇಲೆ ಭರ್ತಿ ಮಾಡಲು ಪರಿಗಣಿಸಲಾಗುವುದು.***

*c. ವಿವಿಧ ಖಾಲಿ ಹುದ್ದೆಗಳ ಪೈಕಿ ಆದ್ಯತೆ ಮೇಲೆ ಭರ್ತಿ ಮಾಡಲು ಗುರುತಿಸಿ ಪ್ರಸ್ತುತ ಪ್ರಕಟಿಸಿದ ಖಾಲಿ ಹುದ್ದೆಗಳ ಪಟ್ಟಿಯು ತಾತ್ಕಾಲಿಕವಾಗಿದ್ದು, ದತ್ತಾಂಶಗಳ ಪರಿಷ್ಕರಣೆ ನಂತರ ಅಥವಾ ಆಡಳಿತಾತ್ಮಕ ಹಿತದೃಷ್ಟಿಯ ಕಾರಣಗಳಿಂದ **ಪಟ್ಟಿಯು ಪರಿಷ್ಕೃತವಾದಲ್ಲಿ ಪ್ರಸ್ತುತ ಅರ್ಜಿಯಲ್ಲಿ ಆಯ್ಕೆ ಮಾಡಿದ ಹುದ್ದೆಗಳು ಸಮಾಲೋಚನೆ ಸಮಯದಲ್ಲಿ ಲಭ್ಯವಿಲ್ಲದೇ ಇರಬಹುದಾಗಿರುತ್ತದೆ.]***

**4.** ಪ್ರಸ್ತುತ ಅನಿಶ್ಚಿತ ವರ್ಗಾವಣೆ/ಸ್ಥಳ ನಿಯುಕ್ತಿಯನ್ನು ಅನುಷ್ಠಾನಗೊಳಿಸಲು ಸಂಬಂಧಿಸಿದ ವೃತ್ತದಲ್ಲಿ ಖಾಲಿ ಇರುವ ಪ್ರವರ್ಗ 'A' ಹುದ್ದೆಗಳ ಕೊರತೆ ಇದ್ದಲ್ಲಿ, ಅಗತ್ಯವಿರುವ ಹುದ್ದೆಗಳನ್ನು ನಿಯಮ 23(5) r/w 22(xv)ರಡಿ ಖಾಲಿ ಮಾಡಲು ಅವಶ್ಯವಿರುವುದರಿಂದ **ಪ್ರಸ್ತುತ ಪ್ರವರ್ಗ 'A' ದಲ್ಲಿನ ಸಿಬ್ಬಂದಿಗಳೂ ಸಹ ತಮ್ಮ ಹುದ್ದೆಗಳನ್ನು ಖಾಲಿ ಮಾಡಿ, ಅರ್ಹತೆಯಂತೆ ಸಂಬಂಧಿಸಿದ ವೃತ್ತದಲ್ಲಿಯೇ ಖಾಲಿ ಇರುವ ಪ್ರವರ್ಗ 'B' / ಪ್ರವರ್ಗ 'C' ಹುದ್ದೆಗಳಿಗೆ ಮಾತ್ರ ಸ್ಥಳನಿಯುಕ್ತಿ ಪಡೆಯಲು ಇಚ್ಛಿಸಿದಲ್ಲಿ, ಅಂತಹ ಸಿಬ್ಬಂದಿಗಳಿಗೆ ಈ ತಂತ್ರಾಂಶದಲ್ಲಿ ವಿಶೇಷ ಅವಕಾಶ ಕಲ್ಪಿಸಲಾಗಿದ್ದು, ದಿನಾಂಕ:10.06.2025** (ಮಂಗಳವಾರ)**ರೊಳಗಾಗಿ ಈ ತಂತ್ರಾಂಶದ ಮೂಲಕ ತಮ್ಮ ಸಹಮತಿಯನ್ನು ಸಲ್ಲಿಸಬಹುದಾಗಿರುತ್ತದೆ.**

*[ಸೂಚನೆ:-*

*a) ಆನ್‌ ಲೈನ್‌ ಮೂಲಕ ಸಹಮತಿ ಸಲ್ಲಿಸಿದ ನಂತರ ಅದನ್ನು ಹಿಂಪಡೆಯಲು ಅವಕಾಶವಿಲ್ಲ.*

*b) ಒಂದು ವೇಳೆ ಅಗತ್ಯವಿರುವ ಸಂಖ್ಯೆಯಲ್ಲಿ ಪ್ರವರ್ಗ 'A' ದಲ್ಲಿನ ಸಿಬ್ಬಂದಿಗಳಿಂದ ಸಹಮತಿ ದೊರೆಯದಿದ್ದಲ್ಲಿ, ಪ್ರಸ್ತುತ ಪ್ರವರ್ಗ 'A' ದಲ್ಲಿ ದೀರ್ಘಾವಧಿಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ* **ಅರ್ಹತೆಯಂತೆ ಸಂಬಂಧಿಸಿದ ವೃತ್ತದಲ್ಲಿ ಖಾಲಿ ಇರುವ ಪ್ರವರ್ಗ 'B' / ಪ್ರವರ್ಗ 'C' ಹುದ್ದೆಗಳಿಗೆ** ಮಾತ್ರ *ವರ್ಗಾವಣೆ ಮೂಲಕ ಅಗತ್ಯವಿರುವ ಪ್ರವರ್ಗ 'A' ಹುದ್ದೆಗಳನ್ನು ಖಾಲಿ ಮಾಡಿಸಲಾಗುವುದು ಹಾಗೂ ಈ ಸಂಬಂಧ ಯಾವುದೇ ಕೋರಿಕೆ/ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.*

c) *ಅಗತ್ಯವಿರುವ ಪ್ರವರ್ಗ 'A' ಹುದ್ದೆಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಹಮತಿಗಳು ಸ್ವೀಕೃತವಾದಲ್ಲಿ, ಅಂತಹ ಹುದ್ದೆಗಳಲ್ಲಿನ ಸೇವೆಯ ಅವಧಿಯ ಆಧಾರದ ಮೇಲೆ ಅಗತ್ಯವಿರುವ ಸಹಮತಿಗಳನ್ನು ಹೊರತುಪಡಿಸಿ, ಇತರೆ ಹೆಚ್ಚಿನ ಸಹಮತಿಗಳನ್ನು ಪರಿಗಣಿಸಲಾಗುವುದಿಲ್ಲ.*

d) *ಆನ್ ಲೈನ್ ಮೂಲಕ ಸಹಮತಿ ಸಲ್ಲಿಸದೇ ಇರುವ ಸಿಬ್ಬಂದಿಗಳಿಗಿಂತ **ಸಹಮತಿ ಸಲ್ಲಿಸಿದ ಸಿಬ್ಬಂದಿಗಳಿಗೆ** ಸಮಾಲೋಚನೆ ಸಮಯದಲ್ಲಿ **ಆದ್ಯತೆ ನೀಡಲಾಗುವುದು** ಹಾಗೂ ನಂತರದಲ್ಲಿ ಈ ಸಂಬಂಧ ಯಾವುದೇ ಕೋರಿಕೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.]*

5. **ಅರಣ್ಯ ಮತ್ತು ವನ್ಯಜೀವಿ ಸಂಪತ್ತನ್ನು ರಕ್ಷಿಸಲು ಅನುಕೂಲವಾಗಲು ಹಾಗೂ ವಿಶೇಷ ತಾಂತ್ರಿಕ ಜ್ಞಾನ/ಅನುಭವ ಅಗತ್ಯವಿರುವ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲು ಆಡಳಿತ ಹಿತದೃಷ್ಟಿಯಿಂದ ನಿಯಮಾವಳಿ 2019ರ ನಿಯಮ 22(xiii)ರಡಿ ಅರ್ಜಿ ಸಲ್ಲಿಸಲು ಸಿಬ್ಬಂದಿಗಳಿಗೆ** (ಈ ಕೆಳಕಂಡ ವಿಧದ ಹುದ್ದೆಗಳಲ್ಲಿನ ಸಿಬ್ಬಂದಿಗಳನ್ನು ಹೊರತುಪಡಿಸಿ) **ವಿಶೇಷ ಅವಕಾಶ ಕಲ್ಪಿಸಲಾಗಿದೆ.**

   1. *ಈಗಾಗಲೇ ಸೂಕ್ಷ್ಮ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು (Those who are already working in critical posts);*
   2. *ಈಗಾಗಲೇ ಈ ಕೆಳಕಂಡ ವಿಧದ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರು (Those who are already working in the following posts) -*
      a. *ಶಾಖೆ / ಗಸ್ತು (Sections/Beats);*
      b. *ಆನೆ ಕಾರ್ಯಪಡೆ / ಚಿರತೆ ಕಾರ್ಯಪಡೆ (Elephant Task Force/ Leopard Task Force);*
      c. *ಕಳ್ಳ ಬೇಟೆ ತಡೆ ಶಿಬಿರ/ಅರಣ್ಯ ರಕ್ಷಣಾ ಶಿಬಿರ (Anti-Poaching Camps/ Forest Protection Camps);*
      d. *ವಿಶೇಷ ಹುಲಿ ರಕ್ಷಣಾ ಪಡೆ (STPF);*
      e. *ಸರ್ಕಾರಿ ಮರಮುಟ್ಟು ಸಂಗ್ರಹಾಲಯ/ ಸರ್ಕಾರಿ ಶ್ರೀಗಂಧ ಕೋಟಿ (Government Timber Depot/ Government Sandalwood Depot);*
      f. *ತರಬೇತಿ/ ಮಾನವ ಸಂಪನ್ಮೂಲ ಅಭಿವೃದ್ಧಿ (Training/Human Resource Development);*
      g. *ಕಾರ್ಯ ಯೋಜನೆ (Working Plan);*
      h. *ಮೃಗಾಲಯಗಳು (Zoological Park);*
      i. *ಆನೆ ಶಿಬಿರ (Elephant Camp); ಅಥವಾ (or)*
      j. *2024-25 / 2025-26ನೇ ಸಾಲಿನ ಸಾಮಾನ್ಯ ವರ್ಗಾವಣೆ/ ಸ್ಥಳನಿಯುಕ್ತಿಗಳಲ್ಲಿ ಸಮಾಲೋಚನೆ ಮೂಲಕ ಈಗಾಗಲೇ ಸ್ಥಳನಿಯುಕ್ತಿ ಪಡೆದಿರುವವರು ಅಥವಾ ಪ್ರಸ್ತುತ ಲೀನ್ ಹುದ್ದೆಯಲ್ಲಿ ಕನಿಷ್ಠ ಸೇವಾವಧಿ ಪೂರ್ಣಗೊಳಿಸದೇ ಇರುವವರು / (Those who have already been transferred/posted through counselling in General Transfers/Postings held during 2024-25 / 2025-26 or those with incomplete minimum tenures in present lien post).*

6. **ಅನಿಶ್ಚಿತ ವರ್ಗಾವಣೆ/ಸ್ಥಳನಿಯುಕ್ತಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-** 20.06.2025 (ಶುಕ್ರವಾರ)

7. **ಅನಿಶ್ಚಿತ ವರ್ಗಾವಣೆ/ಸ್ಥಳನಿಯುಕ್ತಿಗೆ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಸಂಬಂಧಿಸಿದ ಪ್ರಾಧಿಕಾರವು ಷರಾ ಭರ್ತಿ ಮಾಡಲು ಕೊನೆಯ ದಿನಾಂಕ:** - 24.06.2025 (ಮಂಗಳವಾರ)
8. **ಸಮಾಲೋಚನೆ (Counselling) ಸ್ಥಳ ಮತ್ತು ದಿನಾಂಕ: -** ರಾಜ್ಯ ಪ್ರಾಧಿಕಾರ/ ವೃತ್ತ ಪ್ರಾಧಿಕಾರ/ ವಿಭಾಗೀಯ ಪ್ರಾಧಿಕಾರದ ಸಮಾಲೋಚನೆ (Counselling) ಸ್ಥಳ ಮತ್ತು ದಿನಾಂಕಗಳನ್ನು www.aranya.gov.in ಜಾಲಾತಾಣದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು.
9. ಅರ್ಜಿದಾರರು ಅರ್ಜಿ ಸಲ್ಲಿಸುವ ಮುನ್ನ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಮತ್ತು ನಿಯಮಾವಳಿ 2019 ಅನ್ನು ಜಾಗೃತೆಯಿಂದ ಓದಿಕೊಳ್ಳತಕ್ಕದ್ದು.
10. ವರ್ಗಾವಣೆ/ಸ್ಥಳನಿಯುಕ್ತಿಗೆ ಸಂಬಂಧಿಸಿದ ಮಾಹಿತಿಯನ್ನು ಕಾಲಕಾಲಕ್ಕೆ ಅರಣ್ಯ ಇಲಾಖೆಯ ಜಾಲಾತಾಣ(www.aranya.gov.in)ದಲ್ಲಿ ಪ್ರಕಟಿಸಲಾಗುವುದು. ಸಿಬ್ಬಂದಿಗಳು ನಿಯಮಿತವಾಗಿ ಮಾಹಿತಿಯನ್ನು ವೀಕ್ಷಿಸಲು ಸಲಹೆ ನೀಡಿದೆ. ವರ್ಗಾವಣೆ/ಸ್ಥಳನಿಯುಕ್ತಿ ಸಂಬಂಧ ಯಾವುದೇ ಪತ್ರ ವ್ಯವಹಾರ(ಭೌತಿಕ/ಇ-ಮೇಲ್/ಇತರೆ)ವನ್ನು ಪರಿಗಣಿಸಲಾಗುವುದಿಲ್ಲ

Digitally signed by
MEENAKSHI NEGI
Date: 04-06-2025
15:01:30

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ಹಾಗೂ
**ಅಧ್ಯಕ್ಷರು**, ಅಪೆಕ್ಸ್ ಪ್ರಾಧಿಕಾರ

**ಪ್ರತಿ ಮಾಹಿತಿಗಾಗಿ/ಹಾಗೂ ಆಯಾ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಮೇಲಿನ ವರ್ಗಕ್ಕೆ ಸಂಬಂಧಿಸಿದ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರ/ ಅರಣ್ಯ ರಕ್ಷಕರ** *(ಪ್ರಸ್ತುತ ಗಸ್ತು ಅರಣ್ಯ ಪಾಲಕರ)***/ ಅರಣ್ಯ ವೀಕ್ಷಕರ ಗಮನಕ್ಕೆ ತರಲು ಮತ್ತು ಎಲ್ಲಾ ಅರಣ್ಯ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸಲು: -**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ/ EWPRT&CC/ ಅಭಿವೃದ್ಧಿ/ ಅರಣ್ಯ ಸಂರಕ್ಷಣೆ/ ಕಾಂಪಾ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು - **ಈ ಅಧಿಸೂಚನೆಯನ್ನು ಇಲಾಖೆಯ ಜಾಲತಾಣದಲ್ಲಿ ಕೂಡಲೇ ಪ್ರಕಟಿಸಲು.**
4. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
5. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು – **ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ**.
6. ಎಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳು – **ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ.**
7. ಅರಣ್ಯ ಸಂರಕ್ಷಣಾಧಿಕಾರಿಗಳು (ಹುಲಿ ಯೋಜನೆ), ಅರಣ್ಯ ಭವನ, ಅಶೋಕಪುರಂ, ಮೈಸೂರು– **ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ.**
8. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು – **ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ.**

9. ಎಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು – **ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ.**
10. ಆಡಳಿತ ಅಧಿಕಾರಿ/ಆಡಳಿತ ಸಹಾಯಕರು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
11. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ರವರ ಆಪ್ತ ಸಹಾಯಕರು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
12. ಎಲ್ಲಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು / ಅರಣ್ಯ ರಕ್ಷಕರು *(ಪ್ರಸ್ತುತ ಗಸ್ತು ಅರಣ್ಯ ಪಾಲಕರು)* / ಅರಣ್ಯ ವೀಕ್ಷಕರಿಗೆ – **ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ ಹಾಗೂ ಸಂಬಂಧಿಸಿದಪಟ್ಟವರ ಅಧಿಕೃತ ಮೊಬೈಲ್ ಸಂಖ್ಯೆ(official mobile number)ಗೆ T.C.M.S ತಂತ್ರಾಂಶದ ಎಸ್.ಎಂ.ಎಸ್ ಮೂಲಕ.**
13. ಈ ಕಛೇರಿಯ ಬಿ3, ಬಿ7 ಮತ್ತು ಬಿ9 ಶಾಖೆಗಳಿಗೆ.

# ಅನುಬಂಧ – 1

## ಅಪೆಕ್ಸ್ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: KFD/HOFF/B9(MSC)/1/2020-PnR-KFD, ದಿನಾಂಕ:04.06.2025

*[2025-26 ನೇ ಸಾಲಿನ ತ್ರೈಮಾಸಿಕ ಅನಿಶ್ಚಿತ ವರ್ಗಾವಣೆ/ ಸ್ಥಳನಿಯುಕ್ತಿ]*

***ಕರ್ನಾಟಕ ರಾಜ್ಯ ನಾಗರೀಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳ ನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016ರ ಕಲಂ 6(2) ರಡಿ*** *[ಹಾಗೂ ಸ್ವಯಂ ಗಂಭೀರ ಖಾಯಿಲೆಗೆ ಸಂಬಂಧಿತ ವೈದ್ಯಕೀಯ ಪ್ರಕರಣಗಳಲ್ಲಿ]* ***ಸಲ್ಲಿಸುವ ಅರ್ಜಿಗಳೊಂದಿಗೆ upload ಮಾಡಬೇಕಾದ ಪ್ರಮಾಣ ಪತ್ರಗಳು/ದಾಖಲಾತಿಗಳು***

***Certificates/documents to be uploaded for transfer requests under Section 6(2) of the Karnataka State Civil Services (Regulation of Transfers and Postings of Forest Officers and Other Officials) Act, 2016*** *[and also in Self-Serious ailment cases]*

| | ***ಸೆಕ್ಷನ್ 6(2) ರಡಿ ಕೋರಿಕೆ ವರ್ಗಾವಣೆ ಪ್ರಕರಣಗಳು*** *[ಹಾಗು ನಿಯಮ 22(xviii)- Class A - Self-Serious ailment cases]*<br><br>***Transfer requests under Sec 6(2)*** *[and also, under Rule 22(xviii)-Class A - Self-Serious ailment cases]* | ***ಅಪಲೋಡ್ ಮಾಡಬೇಕಾದ ಪ್ರಮಾಣ ಪತ್ರ/ದಾಖಲಾತಿ*** *[ಷರಾ: ಮೂಲ ಪ್ರತಿಯನ್ನು ಸಮಾಲೋಚನಾ ಸಮಯದಲ್ಲಿ ಹಾಜರುಪಡಿಸತಕ್ಕದ್ದು]*<br><br>***Supporting documents to be uploaded as part of online application*** *[Note: The originals must be produced at the time of counselling.]* |
|---|---|---|
| *(i)* | *ಪತಿ ಮತ್ತು ಪತ್ನಿಯರಿಬ್ಬರೂ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ನೌಕರರಾಗಿರುವ ಸಂದರ್ಭದಲ್ಲಿ ಮತ್ತು ದಂಪತಿಗಳಲ್ಲಿ ಒಬ್ಬರು ಬೇರೆ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ, ಆಗ ಇನ್ನೊಬ್ಬರನ್ನು ಸ್ಪಷ್ಟ ಖಾಲಿ ಹುದ್ದೆಯ ಲಭ್ಯತೆಗೊಳಪಟ್ಟು ಸಂಗಾತಿಯು ಕರ್ತವ್ಯದಲ್ಲಿರುವ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ವರ್ಗಾಯಿಸಬಹುದಾದ ಪ್ರಕರಣಗಳಲ್ಲಿ;*<br><br>*In the case of both husband and wife being State Government or Central Government employees and if one of the spouses is working in a different place, then the other spouse may be transferred to the same place or nearby place subject to availability of clear vacancy;* | *ನೇಮಕಾತಿ ಪ್ರಾಧಿಕಾರ/ DDO/ ನಿಯಂತ್ರಣ ಅಧಿಕಾರಿ/ ಸಂಗಾತಿಯ ಕಚೇರಿಯ ಮುಖ್ಯಸ್ಥರಿಂದ ಅವನ/ಅವಳ ಪ್ರಸ್ತುತ lien ಆದ ಸ್ಥಳನಿಯುಕ್ತಿಯ ಹುದ್ದೆಯ ಸ್ಥಳವನ್ನು ನಿರ್ದಿಷ್ಟಪಡಿಸುವ ಪ್ರಮಾಣಪತ್ರ*<br><br>*[**ಷರಾ:** KSCS(ROT&POFO&OO) ಕಾಯ್ದೆ 2016/ನಿಯಮಾವಳಿ 2019ರಡಿ ಜಾರಿಗೊಳಿಸಿದ ಈ <u>ಅಧಿಸೂಚನೆ ದಿನಾಂಕದ ನಂತರ ಈ ಕೆಳಗಿನ ನಮೂನೆಯಲ್ಲಿ * ಪಡೆದ</u> ಪ್ರಮಾಣಪತ್ರ];*<br><br>***Certificate*** *from the Appointing Authority/ DDO/ Controlling Officer/ Head of organisation of the spouse, specifying his/her present place of posting and that he/she is a permanent employee of State Government/Central Government.*<br><br>*[**Note:** The certificate (format* is given below) <u>must have been issued after the Date of</u>* |

| | | |
|---|---|---|
| | | *Notification under the KSCS(ROT&POFO&OO) Act 2016/ Rules 2019];* |
| *(ii)* | *ಸಿಬ್ಬಂದಿಯು ವಿಧವೆಯಾಗಿದ್ದರೆ;*<br><br>*If an employee is a widow;* | *ಪತಿಯ ಮರಣ ಪ್ರಮಾಣಪತ್ರ [ಸಕ್ಷಮ ಪ್ರಾಧಿಕಾರದಿಂದ ಜಾರಿಗೊಳಿಸಿದ]*<br><br>***Death certificate** of husband issued by competent authority* |
| *(iii)* | *ಸಿಬ್ಬಂದಿಯು ದೈಹಿಕವಾಗಿ ವಿಕಲಚೇತನರಾಗಿದ್ದರೆ;*<br><br>*If an employee is physically challenged;* | *ಸರ್ಕಾರವು (ಸಕ್ಷಮ ಪ್ರಾಧಿಕಾರ) ನೀಡಿರುವ ವಿಶಿಷ್ಟ ವಿಕಲಾಂಗ ಐಡಿ (ಯುಡಿಐಡಿ)*<br><br>*Unique Disability ID (**UDID**) issued by competent government authority under the Right of Persons with Disabilities Act 2016;* |
| *(iv)* | *ನೌಕರನ ಪತ್ನಿ ಅಥವಾ ಮಕ್ಕಳು ಗಂಭೀರ ಖಾಯಿಲೆಯಿಂದ ನರಳುತ್ತಿದ್ದು, ಅದಕ್ಕಾಗಿ ಆತನು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಲಭ್ಯವಿರದಿರುವ ಸ್ಥಳದಲ್ಲಿ ಅಗತ್ಯ ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಲುವಾಗಿ ಅಂತಹ ಚಿಕಿತ್ಸೆ ಲಭ್ಯವಿರುವ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯಕವಾಗಿರುವ ನೌಕರರಿಗೆ;*<br><br>*If an employee has spouse or children suffering from serious ailment, for which medical treatment is not available at his/her place of work and his/her transfer is necessary to a place where such treatment is available so as to provide the required medical treatment;*<br><br>***OR***<br><br>*ನೌಕರರು ಸ್ವತಃ ಗಂಭೀರ ಖಾಯಿಲೆಯಿಂದ ನರಳುತ್ತಿದ್ದು, ಅದಕ್ಕಾಗಿ ಆತನು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ವೈದ್ಯಕೀಯ ಚಿಕಿತ್ಸೆ ಲಭ್ಯವಿರದಿರುವ ಸ್ಥಳದಲ್ಲಿ ಅಗತ್ಯ, ವೈದ್ಯಕೀಯ ಚಿಕಿತ್ಸೆ ಒದಗಿಸುವ ಸಲುವಾಗಿ ಅಂಥ ಚಿಕಿತ್ಸತೆ ಲಭ್ಯವಿರುವ ಸ್ಥಳಕ್ಕೆ* | *ಗಂಭೀರ ಖಾಯಿಲೆಯ ಸ್ವರೂಪವನ್ನು ನಿರ್ದಿಷ್ಟಪಡಿಸಿ, ಆತನು/ಆಕೆಯು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ, ಅಗತ್ಯ ಚಿಕಿತ್ಸೆ ಲಭ್ಯವಿಲ್ಲವೆಂದು ಪ್ರಮಾಣೀಕರಿಸಿ ಹೇಳಿ, ಯಾವ ಹತ್ತಿರದ ಸ್ಥಳದಲ್ಲಿ ಅಗತ್ಯ ಚಿಕಿತ್ಸೆ ಲಭ್ಯವಿದೆಯೆಂದು ನಿರ್ದಿಷ್ಟಪಡಿಸಿ ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಆತನ/ಆಕೆಗೆ ಒದಗಿಸುವ ಅಂತಹ ಸ್ಥಳಕ್ಕೆ ಆತನ/ಆಕೆಯನ್ನು ವರ್ಗಾವಣೆ ಮಾಡುವುದು ಅವಶ್ಯಕವೆಂದು ಪ್ರಮಾಣೀಕರಿಸಿ, ಕಾರ್ಯ ನಿರ್ವಹಿಸುತ್ತಿರುವ ಸ್ಥಳಕ್ಕೆ ಸಂಬಂಧಿಸಿದ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರ*<br><br>*[**ಷರಾ:** KSCS(ROT&POFO&OO) ಕಾಯ್ದೆ 2016/ನಿಯಮಾವಳಿ 2019ರಡಿ ಜಾರಿಗೊಳಿಸಿದ ಈ ಅಧಿಸೂಚನೆ ದಿನಾಂಕದ ನಂತರ ಈ ಕೆಳಗಿನ ನಮೂನೆಯಲ್ಲಿ ** ಪಡೆದ ಪ್ರಮಾಣಪತ್ರ];*<br><br>***Certificate** from the jurisdictional District Medical Board specifying the nature of (serious) ailment, (i) certifying the fact that the required treatment is not available at his/her place of work, (ii) specifying the nearest place where the required treatment is available, **AND** (iii) certifying that his/her transfer is necessary to such place to provide him/her the required medical treatment*<br><br>*[**Note:** 1. The certificate in the format** given below must have been issued after the Date of Notification under the KSCS(ROT&POFO&OO)* |

| | | |
|---|---|---|
| | *ವರ್ಗಾವಣೆ ಮಾಡುವುದು ಅವಶ್ಯಕವಾಗಿರುವ ನೌಕರರಿಗೆ;*<br><br>*If the employee him/herself is suffering from serious ailment, for which medical treatment is not available at his/her place of work and his/her transfer is necessary to a place where such treatment is available so as to provide the required medical treatment;* | *Act 2016/ Rules 2019 and must be complete as prescribed in Section 6(2) of the Act 2016].*<br><br>*2. Incomplete certificates or the certificates which need further verification will not be considered for the purpose of Contingent Transfers/Postings. The decision of the Counselling Authority in this regard will be final.* |

***Format of Certificate for cases covered under Section 6(2)(i) of the Act, 2016 :-***

*[To be issued by the Appointing Authority/ D.D.O./ Controlling officer/ Head of organization of the spouse specifying his/her present place of (lien) posting and that he/she is a permanent employee of State Government/Central Government]*

***CERTIFICATE***

*It is to certify that Sri/Smt. ........................................ (full name of spouse), Husband/Wife of Sri/Smt. .......................................................... (full name of Forest officer/Other official) is a permanent employee of State Government / Central Government. He/she is working as .................................. (designation) and is presently posted at ........................ (lien place) since ......................... (date).*

***Date:*** .........

*Appointing Authority/ DDO/*
*Controlling Officer/*
*Head of organisation*

---

*****Format of Certificate for Serious ailment cases covered under Section 6(2)(iv) of the Act, 2016 and for Rule 22(xviii) - Class A: Self- Serious ailment cases:-***

*[to be issued by the District Medical Board where the Applicant is working in lien cadre]*

***CERTIFICATE***

*It is certified that Sri/Smt./Kum. .................................................. (full name of patient) who is Husband/Wife/Child/Self (Tick the correct option) of Sriyuth ......................................., .............................................. (full name and designation of Forest officer/Other official) who is presently posted at ........................................ (name of lien place with Taluk and District) is suffering from ......................................................... (name of disease) which is a serious ailment, for*

*which the medical treatment is not available at the place of working of the Forest officer/Other official.*

*It is further certified that ..................................... (Name of place) is the nearest place where the required medical treatment is available for this ailment. Transfer of the Forest officer/Other official to that place is necessary to provide him/her the required medical treatment.*

***Date:*** *.........*

| | | |
|---|---|---|
| *(Signature with office seal)* | *(Signature with office seal)* | *(Signature with office seal)* |
| *Board Member 1* | *Board Member 2* | *Board Chairperson* |

---